ಸಾಕ್ಷಿಯನ್ನು ದಿಃ 05.01.2017 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

(ಮುಖ್ಯ ವಿಚಾರಣೆ ಬದಲಾಗಿ ನಾನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದನ್ನು ನಾನು ಹೇಳಿ ಬರೆಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸರಿ ಮತ್ತು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.).

ದಾಖಲೆಗಳನ್ನು ಗುರುತಿಸುವ ಬಗ್ಗೆ ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ. ಎನ್‌ಜಿಜೆಕೆ ವಕೀಲರಿಂದ ಃ

ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಹಕ್ಕುಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಕಂದಾಯ ಪಾವತಿ ಮಾಡಿದ 7 ರಶೀದಿಗಳನ್ನು ನಿಪಿ-2 ರಿಂದ 8 ಎಂದು, 1982 ರಿಂದ ನಾನು 2012 ರತನಕ ಕಂದಾಯ ಪಾವತಿ ಮಾಡಿಕೊಂಡು ಬರುತ್ತಿದ್ದೇನೆ. ಮನೆಯನ್ನು ಕಟ್ಟಲು ನೀಡಿದ ಪರವಾನಗಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-9 ಎಂದು, ಪೋಲಿಸರಿಗೆ ದೂರನ್ನು ನೀಡಿದ್ದು ಅದರ ಸ್ವೀಕೃತಿಯನ್ನು ನಿಪಿ-10 ಎಂದು, ಪಂಚಾಯಿತಿಯವರು ನನಗೆ ನೀಡಿದ ಹಿಂಬರಹವನ್ನು ನಿಪಿ-11 ಎಂದು, ತಾಲ್ಲೂಕು ಪಂಚಾಯಿತಿಗೆ ದೂರನ್ನುನೀಡಿದ್ದು ಅದರ ಸ್ವೀಕೃತಿಯನ್ನು ನಿಪಿ-12 ಎಂದು, ಇ ಸಿ ಯನ್ನು ನಿಪಿ-13 ಎಂದು, ಆರ್ ಎ ನಂಬರ್ 127/2001 ರಲ್ಲಿನ ಆರ್ಡರ್ ಶೀಟಿನ ದೃಢೀಕೃತ ನಕಲನ್ನು ನಿಪಿ-14 ಎಂದು, ಅದರಲ್ಲಿ ಸಲ್ಲಿಸಿದ ರಾಜಿ ಅರ್ಜಿಯನ್ನು ನಿಪಿ-15 ಎಂದು, ಡಿಕ್ರಿಯನ್ನು ನಿಪಿ-16ಎಂದು, ಕಂದಾಯ ಪಾವತಿ ಮಾಡಿದ 2 ರಶೀದಿಯನ್ನು ನಿಪಿ-17 ಮತ್ತು 18 ಎಂದು ಗುರುತಿಸಲಾಯಿತು. 9 ಡಿಮಾಂಡ್ ರಿಜಿಸ್ಟರ್‌ನ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 4 ನೇ ಪ್ರತಿವಾದಿ ಪರ ವಕೀಲರಾದ ಆರ್‌ಎನ್ ವಕೀಲರು ಸದರಿ ದಾಖಲೆಗೆ ಯಾರು ಅರ್ಜಿ ಸಲ್ಲಿಸಿದ್ದಾರೆ, ಯಾವಾಗ ಸಲ್ಲಿಸಿದ್ದಾರೆ, ಯಾರು ಮಾಹಿತಿ ಸಿದ್ದಪಡಿಸಿದ್ದಾರೆ, ಯಾವಾಗ ನೀಡಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲದ ಕಾರಣ ಸದರಿ ದಾಖಲೆಯು ಪ್ರಾಥಮಿಕ ದಾಖಲೆಯಾಗಲೀ, ದ್ವಿತಿಯ ದಾಖಲೆಯಾಗಲಿ ಆಗಿರುವುದಿಲ್ಲ, ಆದ್ದರಿಂದ ನಿಶಾನೆಗೊಳಿಸಲು ಬರುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ. ವಾದಿ ಪರ ವಕೀಲರು ಸದರಿ ದಾಖಲೆಗಳು ಪ್ರಾಥಮಿಕ ದಾಖಲೆಯಾದ್ದರಿಂದ ನಿಶಾನೆಗೊಳಿಸಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮುಂದಿನ ಆದೇಶಕ್ಕಾಗಿ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,
ಟಿ ನರಸೀಪುರ.